# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 23.08.2019ರ ಶುಕ್ರವಾರದಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳು.

ಹಾಜರಿದ್ದ ಸದಸ್ಯರು:

1. ಪ್ರೊ. ಜಿ. ಹೇಮಂತಕುಮಾರ್ – ಕುಲಪತಿಗಳು ಹಾಗೂ ಅಧ್ಯಕ್ಷರು
2. ಪ್ರೊ. ಮಹದೇವ – ಸದಸ್ಯರು
3. ಕು. ಸಹನಾ ಶಿವಪ್ಪ – ಸದಸ್ಯರು
4. ಡಾ. ಕೆ.ಕೆ. ವಿಶಾಲಾಕ್ಷಿ – ಸದಸ್ಯರು
5. ಶ್ರೀ ಸಿ. ಜಯರಾಮ – ಸದಸ್ಯರು
6. ಶ್ರೀ ಜಿ. ಅಶ್ವಥ ನಾರಾಯಣ – ಸದಸ್ಯರು
7. ಶ್ರೀ ಕೆ.ಟಿ. ಅಪ್ಪಾಜಪ್ಪ – ಸದಸ್ಯರು
8. ಪ್ರೊ. ಕೆ.ಎಂ. ಮಹದೇವನ್ – ಸದಸ್ಯರು
   ಕುಲಸಚಿವರು (ಪರೀಕ್ಷಾಂಗ)
9. ಪ್ರೊ. ಲಿಂಗರಾಜ ಗಾಂಧಿ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

<u>ಹಾಜರಾಗದ ಸದಸ್ಯರು:</u>

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಪತಿಗಳು ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು. ನಂತರ ಪ್ರೊ. ಪಾರ್ವತಮ್ಮ, ಮಾಜಿ ಸಿಂಡಿಕೇಟ್ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಇತ್ತೀಚೆಗೆ ದೈವಾಧೀನರಾಗಿರುವ ವಿಷಯವನ್ನು ಸಭೆಗೆ ತಿಳಿಸಿ ಮೃತರ ಗೌರವಾರ್ಥ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷಗಳ ಮೌನ ಆಚರಿಸಿ ಸಂತಾಪ ಸೂಚಿಸಲಾಯಿತು.

ಹಾಗೂ

ಪ್ರೊ. ಟಿ.ಎಸ್.ದೇವರಾಜು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರು ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗಕ್ಕೆ ಪ್ರಭಾರ ಹಣಕಾಸು ಅಧಿಕಾರಿಗಳಾಗಿ ನೇಮಕಗೊಂಡು ಸಿಂಡಿಕೇಟ್‌ನ ನಾಲ್ಕನೇ ಸಾಮಾನ್ಯ ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿರುವುದಕ್ಕೆ ಸ್ವಾಗತಿಸಿ ಅವರನ್ನು ಸಭೆಗೆ ಪರಿಚಯಿಸಲಾಯಿತು ಹಾಗೂ ಇದುವರೆಗೂ ಪ್ರಭಾರ ಹಣಕಾಸು ಅಧಿಕಾರಿಯಾಗಿ ವಿಶೇಷ ಆಹ್ವಾನಿತರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ಬಿ. ಮಹದೇವಪ್ಪ ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ: 28.06.2019ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 28.06.2019ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| II | ದಿನಾಂಕ: 28.06.2019ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ದಿನಾಂಕ: 28.06.2019ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿಯನ್ನು ಗಮನಿಸಲಾಯಿತು. |
| 2019/8.1 | ವ್ಯವಹಾರ ಆಡಳಿತ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ-ಅನುಸಮರ್ಥನೆಗಾಗಿ |
| ತೀರ್ಮಾನ | ಪ್ರೊ. ಆಯಿಷಾ ಎಂ ಶರೀಫ್ ಇವರನ್ನು ದಿನಾಂಕ: 05.08.2019ರಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವ್ಯವಹಾರ ಆಡಳಿತ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.2 | ಪ್ರೊ. ಟಿ.ಎಸ್. ದೇವರಾಜು, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರನ್ನು ಪ್ರಭಾರ ಹಣಕಾಸು ಅಧಿಕಾರಿಯಾಗಿ ನೇಮಕ ಮಾಡಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 20(2)ರಡಿಯಲ್ಲಿ ಮಾನ್ಯ ಕುಲಪತಿಗಳು ಪ್ರದತ್ತವಾದ ಅಧಿಕಾರದಡಿ ಪ್ರೊ. ಟಿ.ಎಸ್.ದೇವರಾಜು, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇವರನ್ನು ಪ್ರಭಾರ ಹಣಕಾಸು ಅಧಿಕಾರಿಯನ್ನಾಗಿ ನಿಯೋಜನೆ ಮೇರೆಗೆ ವಿ.ವಿ.ಆದೇಶ ಸಂಖ್ಯೆ: ಇಟಿ5/635/1989-90 ದಿನಾಂಕ: 08.07.2019ರ ಆದೇಶದನ್ವಯ ನೇಮಕ ಮಾಡಿರುವುದನ್ನು ಗಮನಿಸಿ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.3 | ಡಾ. ಶೀಲಾ ಹೆಚ್.ಕೆ., ಸಹ ಪ್ರಾಧ್ಯಾಪಕರು, ನೃತ್ಯ ವಿಭಾಗ, ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವ ಬಗ್ಗೆ |
| ತೀರ್ಮಾನ | ಡಾ. ಶೀಲಾ ಹೆಚ್.ಕೆ. ಸಹ ಪ್ರಾಧ್ಯಾಪಕರು, ನೃತ್ಯ ವಿಭಾಗ, ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು ದಿನಾಂಕ: 13.05.2019 ರಿಂದ 06.06.2019ರವರೆಗೆ ಸ್ವಂತ ಕೆಲಸದ ನಿಮಿತ್ತ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ವಿಶ್ವವಿದ್ಯಾನಿಲಯದ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದೆ ಹೋಗಿ ಬರಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿ ಆದೇಶ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/8.4 | Asia Pacific Institute of Embryology, Mysuru, ಈ ಸಂಸ್ಥೆಯವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specified studies/ Speciailized studies and Research Statutes-2008ರಡಿ ನಡೆಸುತ್ತಿರುವ M.Sc. in Clinical Embryology and pre-Implantation Genetics |

| | |
|---|---|
| | ಕೋರ್ಸಿಗೆ ಹಾಲಿ ಇರುವ ಸಂಖ್ಯಾಮಿತಿ ಹೆಚ್ಚುವರಿಯಾಗಿ 20 ಸೀಟುಗಳನ್ನು ನೀಡುವುದರ ಕುರಿತು ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವ ಬಗ್ಗೆ–ಅನುಸಮರ್ಥನೆಗಾಗಿ |
| ತೀರ್ಮಾನ | Specified studies/ Speciailized studies and Research Statutes-2008ರಡಿ ನಡೆಸುತ್ತಿರುವ M.Sc. in Clinical Embryology and pre-Implantation Genetics ಕೋರ್ಸಿಗೆ ಹಾಲಿ ಇರುವ ಸಂಖ್ಯಾಮಿತಿ ಹೆಚ್ಚುವರಿಯಾಗಿ 20 ಸೀಟುಗಳನ್ನು ನೀಡುವ ಸಂಬಂಧ ರಚಿಸಲಾಗಿದ್ದ ತಜ್ಞರ ಪರಿವೀಕ್ಷಣಾ ಸಮಿತಿಯು ಶಿಫಾರಸ್ಸು ಮಾಡಿ ಸಲ್ಲಿಸಿರುವ ವರದಿಯಂತೆ 2019–20ನೇ ಸಾಲಿಗೆ ಹೆಚ್ಚುವರಿಯಾಗಿ 20 ಸೀಟುಗಳನ್ನು ನಿಗಧಿಪಡಿಸಿ ಆದೇಶ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.5 | 2019–20ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಮೊದಲನೇ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 10.07.2019ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ 2019–20ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಮೊದಲನೇ ಸಭೆಯ ನಡವಳಿಯನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/8.6 | ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರಕ್ಕೆ ನಿರ್ದೇಶಕರನ್ನು ನೇಮಿಸುವ ಬಗ್ಗೆ. |
| ತೀರ್ಮಾನ | ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದಲ್ಲಿ ಈ ಹಿಂದೆ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ ಪ್ರೊ. ಜೆ.ಸೋಮಶೇಖರ್, ಪ್ರಾಧ್ಯಾಪಕರು ಹಾಗೂ ಡೀನ್, ಸಮಾಜ ವಿಜ್ಞಾನ ನಿಕಾಯ ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇವರು ದಿನಾಂಕ: 05.07.2019ರಂದು ಹಿಂದಿರುಗಿ ಸದರಿ ಕೇಂದ್ರದಲ್ಲಿ ಪ್ರಾಧ್ಯಾಪಕ ಹುದ್ದೆಗೆ ವರದಿ ಮಾಡಿಕೊಂಡಿರುವುದರಿಂದ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಕೇಂದ್ರದ ನಿರ್ದೇಶಕರನ್ನಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. ಮತ್ತು ಹಾಲಿ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಸ್.ನರೇಂದ್ರಕುಮಾರ್ ಇವರು ಕೋರಿರುವಂತೆ ಸಂಯೋಜಕರ ಹುದ್ದೆಯಿಂದ ಬಿಡುಗಡೆಗೊಳಿಸಲು ಸಹ ಸಿಂಡಿಕೇಟ್ ಅನುಮತಿಸಿತು. |
| 2019/8.7 | ದಿನಾಂಕ: 20.08.2019ರಿಂದ ಪರಿಷ್ಕೃತ ದರದಲ್ಲಿ ಗುಂಪು ವಿಮಾ ಯೋಜನೆಯನ್ನು ಅಳವಡಿಸುವ ಬಗ್ಗೆ. |
| ತೀರ್ಮಾನ | 01–03–2018ರ ಸರ್ಕಾರದ ಆದೇಶ ಹಾಗೂ ದಿನಾಂಕ: 08.08.2018ರ ಅಧಿಸೂಚನೆಯ ಅನ್ವಯ ಗುಂಪು ವಿಮಾ ಯೋಜನೆಯಡಿಯಲ್ಲಿ ಒಳಪಡುವ ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ ಜುಲೈ 2019ರ ಮಾಹೆಯ ವೇತನದಿಂದ ಪರಿಷ್ಕೃತ ದರದ ವಂತಿಕೆಯನ್ನು ಕಟಾವು ಮಾಡುವ ವಿಷಯವನ್ನು ಮತ್ತು ಈ ಸಂಬಂಧ LIC of India, P & GS ವಿಭಾಗದಿಂದ GSLI ವಂತಿಕೆಯನ್ನು Terms & Conditionಗಳೊಡನೆ ಪರಿಷ್ಕರಿಸಿ ನೀಡಿರುವುದನ್ನು ಸುತ್ತೋಲೆಯ ಮೂಲಕ ಉದ್ಯೋಗಿಗಳ ಗಮನಕ್ಕೆ ತಂದು ಅದರಂತೆ ವಿಶ್ವವಿದ್ಯಾನಿಲಯವು ಕ್ರಮಕೈಗೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.8 | ದಿನಾಂಕ: 01.09.2014ರ ನಂತರ ವಿಶ್ವವಿದ್ಯಾನಿಲಯದ ಸೇವೆಗೆ ಸೇರಿದ ಉದ್ಯೋಗಿಗಳಿಗೆ ದಿನಾಂಕ: 01.05.2019 ರಿಂದಲೇ ಪರಿಷ್ಕೃತ ದರದಲ್ಲಿ ಗುಂಪು ವಿಮಾ (GTIS) ಯೋಜನೆಯನ್ನು ಅಳವಡಿಸುವ ಬಗ್ಗೆ. |
| ತೀರ್ಮಾನ | 01–03–2018ರ ಸರ್ಕಾರದ ಆದೇಶ ಹಾಗೂ ದಿನಾಂಕ: 08.08.2018ರ ಅಧಿಸೂಚನೆಯ ಅನ್ವಯ ದಿನಾಂಕ: 01.09.2014ರ ನಂತರ ವಿಶ್ವವಿದ್ಯಾನಿಲಯದ ಸೇವೆಗೆ ಸೇರಿದ |

| | |
|---|---|
| | ಉದ್ಯೋಗಿಗಳಿಗೆ ದಿನಾಂಕ: 01.05.2019ರಿಂದಲೇ ಜಾರಿಗೆ ಬಂದಂತೆ GTIS ಪರಿಷ್ಕೃತ ದರದ ವಂತಿಕೆಯನ್ನು ಅಳವಡಿಸಿಕೊಳ್ಳಬೇಕಾಗಿದ್ದರಿಂದ ಮತ್ತು ಈ ಸಂಬಂಧ LIC of India, P & GS ವಿಭಾಗದಿಂದ GTIS ವಂತಿಕೆಯನ್ನು Terms & Condition ಗಳೊಡನೆ ಪರಿಷ್ಕರಿಸಿ ನೀಡಿರುವಂತೆ ಏಪ್ರಿಲ್, ಮೇ ಮತ್ತು ಜೂನ್ 2019ರ ಮಾಹೆಯ ವ್ಯತ್ಯಾಸದ ವಂತಿಕೆ ಮೊತ್ತವನ್ನು ಜುಲೈ 2019ರ ಮಾಹೆಯ ವೇತನದಿಂದ ಕಟಾವುಗೊಳಿಸುವ ವಿಷಯವನ್ನು ಸುತ್ತೋಲೆಯ ಮೂಲಕ ಉದ್ಯೋಗಿಗಳ ಗಮನಕ್ಕೆ ತಂದು ಅದರಂತೆ ವಿಶ್ವವಿದ್ಯಾನಿಲಯವು ಕ್ರಮಕೈಗೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.9 | ಮೈಸೂರು ವಿಶ್ವವಿದ್ಯಾನಿಲಯದ ಸೇವೆಗೆ ಸೇರುವ ಪೂರ್ವದಲ್ಲಿ ಸಲ್ಲಿಸಿದ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಅರ್ಹತಾ ಸೇವೆಯಾಗಿ ಪರಿಗಣಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ ಅಧಿನಿಯಮ 1979ರ ಅನುಸಾರ ಹಾಗೂ ದಿನಾಂಕ 23-03-2004ರ ಸಿಂಡಿಕೇಟ್ ತೀರ್ಮಾನದಂತೆ ಡಾ. ಬಿ.ಎಂ ವೆಂಕಟೇಶ್, ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರು ವಿಶ್ವವಿದ್ಯಾನಿಲಯದ ಸೇವೆಗೆ ಸೇರುವ ಪೂರ್ವದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಹರವೆ, ಚಾಮರಾಜನಗರ ತಾಲ್ಲೂಕು ಇಲ್ಲಿ ಸಲ್ಲಿಸಿದ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಅರ್ಹತಾ ಸೇವೆಯಾಗಿ ಪರಿಗಣಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/8.10 | ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಮತ್ತು ವಯೋಮಿತಿಯಲ್ಲಿ ಮೀಸಲಾತಿ/ ರಿಯಾಯಿತಿ ಕಲ್ಪಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿ ಬರುವಂತಹ ಕೋರ್ಸ್‌ಗಳಿಗೆ ಅನ್ವಯಿಸುವಂತೆ (NCTE, AICTE, COA, BCI ಇಂತಹ ಇತರೆ ಶಾಸನಬದ್ಧ ಸಂಸ್ಥೆಗಳ ಕೋರ್ಸ್‌ಗಳನ್ನು ಹೊರತುಪಡಿಸಿ) ವಿಶೇಷ ಚೇತನರಿಗೆ ವಿಶ್ವವಿದ್ಯಾನಿಲಯ ನಿಗಧಿಪಡಿಸಿರುವ ಸಂಖ್ಯಾಮಿತಿ ಹೊರತುಪಡಿಸಿ ಶೇ. 5ರಷ್ಟು ಸೀಟುಗಳನ್ನು ಹಾಗೂ ಪ್ರವೇಶ ವಯೋಮಿತಿಯನ್ನು 5 ವರ್ಷಗಳವರೆಗೆ ವಿಸ್ತರಿಸುವುದರೊಂದಿಗೆ ವಿನಾಯಿತಿ ನೀಡಲು ವಿದ್ಯಾವಿಷಯಕ ಪರಿಷತ್ತು ತೀರ್ಮಾನಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/8.11 | ಡಾ. ರಾಜ್‌ಕುಮಾರ್ ಎಚ್. ಗರಂಪಳ್ಳಿ, ಸಹಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇಲ್ಲಿನ ಸಸ್ಯಶಾಸ್ತ್ರ ವಿಷಯದ ಪ್ರಾಧ್ಯಾಪಕರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಹಾಗೂ ಹುದ್ದೆಯ ಮೇಲಿನ ಹಕ್ಕನ್ನು ಎರಡು ವರ್ಷಗಳ ಅವಧಿಗೆ ಕಾಯ್ದಿರಿಸುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಡಾ.ರಾಜ್‌ಕುಮಾರ್ ಎಚ್. ಗರಂಪಳ್ಳಿ, ಸಹಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇಲ್ಲಿನ ಸಸ್ಯಶಾಸ್ತ್ರ ವಿಷಯದ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಇಟಿ8/608/2012-13 ದಿನಾಂಕ: 04.06.2019ರ ಅನ್ವಯ ದಿನಾಂಕ: 06.06.2019ರಂದು ಕರ್ತವ್ಯದಿಂದ ಬಿಡುಗಡೆ ಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿನ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಮೇಲಿನ ಹಕ್ಕನ್ನು ಹೊಂದಲು ಅನುಮತಿಸಿತು.<br><br>ಮುಂದುವರೆದು, ದಿನಾಂಕ 5-7-2019ರಂದು ಡಾ.ರಾಜ್‌ಕುಮಾರ್ ಎಚ್. ಗರಂಪಳ್ಳಿ ಅವರು ಆರೋಗ್ಯ ಸಮಸ್ಯೆ ಮತ್ತು ವೈಯಕ್ತಿಕ ಕಾರಣಗಳಿಂದ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ |

| | |
|---|---|
| | ಅಧ್ಯಯನ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹುದ್ದೆಗೆ ಎದುರಾಗಿ ಹಿಂದಿರುಗಿ ಬರುವ ಅವರ ಮನವಿಯನ್ನು ಪರಿಗಣಿಸಿ ಅನುಮತಿಸಲು ಸಭೆಯು ತೀರ್ಮಾನಿಸಿತು. |
| 2019/8.12 | ವಿಶ್ವವಿದ್ಯಾನಿಲಯ ವಾಹನ Toyota Qualis KA-09 N-770 ಹರಾಜು ವಿಲೇವಾರಿ ಮಾಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯ Toyota Qualis KA-09 N-770 ಸಂಖ್ಯೆಯ ವಾಹನವು 12 ವರ್ಷಗಳಷ್ಟು ಹಳೆಯದಾಗಿದ್ದು ಸುಮಾರು 4 ಲಕ್ಷ 50 ಸಾವಿರ ಕಿ.ಮೀ.ಗಳಷ್ಟು ಚಾಲನೆಯಾಗಿರುವುದರಿಂದ ಮತ್ತು ಇದರ ಬಿಡಿಭಾಗಗಳು ಸಿಗದೇ ದುರಸ್ಥಿಗೆ ಅಧಿಕ ವೆಚ್ಚ (ರೂ.1,53,000/-ಗಳು) ಮತ್ತು ದೀರ್ಘ ಸಮಯ ಬೇಕಾಗುವುದರಿಂದ ಆರ್.ಟಿ.ಓ. ಇಲಾಖೆಯು ನಿಗಧಿಗೊಳಿಸಿರುವ ವಾಹನದ ಮೌಲ್ಯ ರೂ. 2,80,000/- ಗಳಿಗೆ ನಿಯಮಾನುಸಾರ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಸಭೆಯು ಅನುಮತಿಸಿತು. |
| 2019/8.13 | ಶ್ರೀ ಬಿ. ಈಶ್ವರ, ಸೇವಕ, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸ್ವಯಂ ನಿವೃತಿ ಪಡೆಯಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಬಿ.ಈಶ್ವರ, ಸೇವಕ, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 30.09.2019ರಂದು ಸ್ವಯಂ ನಿವೃತ್ತಿ ಕೋರಿ ದಿನಾಂಕ: 01.07.2019ರಂದು ಮನವಿ ಸಲ್ಲಿಸಿರುವುದನ್ನು ಮತ್ತು ಅವರ ಸೇವಾ ವಿವರಗಳನ್ನು ಪರಿಶೀಲಿಸಿದ ಸಿಂಡಿಕೇಟ್ ಇವರಿಗೆ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ (ಸೇವಾ ಷರತ್ತು) ಮಾರ್ಪಡಿಸಿದ ಅಧಿನಿಯಮಗಳು 1984ರ ಪ್ರಕಾರ ಹಾಗೂ ಕೆ.ಸಿ.ಎಸ್.ಆರ್ ನಿಯಮ 285(1)(ಎ)ರ ಪ್ರಕಾರ ದಿನಾಂಕ: 30.09.2019ರಂದು ಜಾರಿಗೆ ಬಂದಂತೆ ಸ್ವಯಂ ನಿವೃತ್ತಿ ಹೊಂದಲು ಸಭೆಯು ಅನುಮೋದಿಸಿತು. |
| 2019/8.14 | University of Mysore and Indian Institute of Health Management Research Bangalore (HHMRB) ಇವುಗಳ ನಡುವೆ "Collaboration for Promotion of Research and Education" ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ Prof. Usha Manjunath, Director, Indian Institute of Health Management Research (HHMR), Bangalore ಅವರು MOU ಕರಡು ಪ್ರತಿಯನ್ನು ಸಲ್ಲಿಸಿದ್ದಾರೆ. |
| ತೀರ್ಮಾನ | University of Mysore and Indian Institute of Health Management Research Bangalore (HHMRB) ಇವುಗಳ ನಡುವೆ "Collaboration for Promotion of Research and Education" ವಿಷಯದಲ್ಲಿ ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಕರಡು ಒಡಂಬಡಿಕೆಯನ್ನು ಪರಿಶೀಲಿಸಿ ಸಭೆಯಲ್ಲಿ ಅನುಮೋದಿಸಲಾಯಿತು. |
| 2019/8.15 | ದಿವಂಗತ ಕಾಂತರಾಜು, ಹಿರಿಯ ಸಹಾಯಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಮಗಳಾದ ಕು॥ ನಿಸರ್ಗ ಕೆ.ಟಿ ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಕಾಂತರಾಜು, ಹಿರಿಯ ಸಹಾಯಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸೇವೆಯಲ್ಲಿದ್ದಾಗಲೇ ನಿಧನ ಹೊಂದಿದ್ದು ಅವರ ಮಗಳಾದ ಕು॥ ನಿಸರ್ಗ ಕೆ.ಟಿ ರವರು ದ್ವಿತೀಯ ಪಿ.ಯು.ಸಿ ತೇರ್ಗಡೆ ಹೊಂದಿರುವುದರಿಂದ ವಿ.ವಿ.ಅಧಿನಿಯಮದ ಪ್ರಕಾರ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ರಚಿಸಿರುವ ಅಧಿನಿಯಮದ ಪ್ರಕಾರ ಅನುಕಂಪದ ಆಧಾರದ |

| | |
|---|---|
| | ಮೇಲೆ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2019/8.16 | Sampoorna International Institute of Agri Science & Horticultural Technology, ನಂ.271/2, ಕೆ.ಬಿ.ದೊಡ್ಡಿ ಗ್ರಾಮ, ಮಾದಪುರ ದೊಡ್ಡಿ, ನಿಡಗಟ್ಟ ಪೋಸ್ಟ್, ನಿಡಗಟ್ಟ ಗ್ರಾಮ ಪಂಚಾಯತ್, ಅತ್ತೂರ್ ಹೋಬಳಿ, ಮದ್ದೂರು ತಾ. ಮಂಡ್ಯ ಜಿಲ್ಲೆ – 571 433 ಈ ಸಂಸ್ಥೆಯವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specified studies/Specialized studies and Research Statutes-2008ರಡಿ ನಡೆಸುತ್ತಿರುವ B.Sc. (Hon's) Agricultural/B.Sc. (Hon's) Horticultural ಕೋರ್ಸಿಗೆ ಹೆಚ್ಚುವರಿಯಾಗಿ 60 ಸೀಟುಗಳನ್ನು ನೀಡುವುದರ ಕುರಿತು ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವ ಬಗ್ಗೆ – ಅನುಸಮರ್ಥನೆಗಾಗಿ. |
| ತೀರ್ಮಾನ | Sampoorna International Institute of Agri Science & Horticultural Technology ಈ ಸಂಸ್ಥೆಯವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specified studies/Specialized studies and Research Statutes-2008ರಡಿ ನಡೆಸುತ್ತಿರುವ B.Sc. (Hon's) Agricultural/B.Sc. (Hon's) Horticultural ಕೋರ್ಸಿಗೆ ಹೆಚ್ಚುವರಿಯಾಗಿ 60 ಸೀಟುಗಳನ್ನು ನೀಡುವುದರ ಕುರಿತು ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ 2019–20ನೇ ಸಾಲಿನಿಂದ ನಿಗಧಿಪಡಿಸಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.17 | ಡಾ. ಬಿ.ಶಂಕರ್, ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ಇವರಿಗೆ Hong Kong ಮತ್ತು Macau ದೇಶಗಳಿಗೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | ಡಾ.ಬಿ.ಶಂಕರ್, ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ಇವರಿಗೆ Hong Kong ಮತ್ತು Macau ದೇಶಗಳಿಗೆ ಸ್ವಂತ ಕೆಲಸದ ಮೇಲೆ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಬೇಸಿಗೆ ರಜೆಯ ಅವಧಿಯಲ್ಲಿ ದಿನಾಂಕ: 24.07.2019 ರಿಂದ 30.07.2019ರವರೆಗೆ ಹೋಗಿಬರಲು ಅನುಮತಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.18 | ಡಾ.ವನಮಾಲ ಎಸ್.ಎಂ. ಸಹ ಪ್ರಾಧ್ಯಾಪಕರು ಇಂಗ್ಲೀಷ್ ವಿಭಾಗ, ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ, ಇವರಿಗೆ United States of America ಗೆ ಭೇಟಿ ನೀಡಲು ಅನುಮತಿ ನೀಡಿರುವ ಬಗ್ಗೆ – ಅನುಸಮರ್ಥನೆಗಾಗಿ |
| ತೀರ್ಮಾನ | ಡಾ.ವನಮಾಲ ಎಸ್.ಎಂ. ಸಹ ಪ್ರಾಧ್ಯಾಪಕರು ಇಂಗ್ಲಿಷ್ ವಿಭಾಗ, ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ, ಇವರು ಬೇಸಿಗೆ ರಜೆ ಅವಧಿಯಲ್ಲಿ ಅಂದರೆ ದಿನಾಂಕ: 05.05.2019 ರಿಂದ 30.06.2019ರವರೆಗೆ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಸ್ವಂತ ಕೆಲಸದ ನಿಮಿತ್ತ United States of Americaಗೆ ಹೋಗಿ ಬರಲು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/8.19 | ICARE School of Research and Development, ICARE Complex, P.O. Hatiberia Dist., Purba Medinipur, West Bengal, ಇವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕೇಂದ್ರದ ವಿಳಾಸ ಬದಲಾವಣೆ ಮಾಡುವ ಬಗ್ಗೆ – ಪರಿವೀಕ್ಷಣಾ |

| | |
|---|---|
| | ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವ ಬಗ್ಗೆ – ಅನುಸಮರ್ಥನೆಗಾಗಿ |
| ತೀರ್ಮಾನ | ICARE School of Research and Development, ICARE Complex, P.O. Hatiberia Dist., Purba Medinipur, West Bengal, ಇವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕೇಂದ್ರದ ವಿಳಾಸ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿಯ ವರದಿಯನುಸಾರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಅಧಿನಿಯಮಗಳಾನುಸಾರ ಸದರಿ ಸಂಸ್ಥೆಯ ವಿಳಾಸ ಬದಲಾವಣೆಗೆ ಅಧಿಸೂಚನೆ ಹೊರಡಿಸಲಾಗಿರುವುದನ್ನು ಸಭೆಯು ಅನುಸಮರ್ಥಿಸಿತು. |
| 2019/8.20 | ಶ್ರೀ.ಡಿ.ದೇವರಾಜು ಅರಸು ಪೀಠಕ್ಕೆ ಡಾ.ಎಂ.ವಿ.ಶ್ರೀನಿವಾಸಗೌಡ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವ ಬಗ್ಗೆ. – ಅನುಸಮರ್ಥನೆಗಾಗಿ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಶ್ರೀ.ಡಿ.ದೇವರಾಜು ಅರಸು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಶ್ರೀ ಕೆ.ವಿ. ಅಯ್ಯಣ್ಣ ಇವರನ್ನು ಆಹ್ವಾನಿಸಲಾಗಿದ್ದು ಇವರು ದಿನಾಂಕ: 14.07.2017 ರಂದು ವರದಿ ಮಾಡಿಕೊಂಡಿರುತ್ತಾರೆ. ಆದರೆ ಸದರಿಯವರು ಐಸಿಎಸ್‌ಎಸ್‌ಆರ್ ಸೀನಿಯರ್ ಫೆಲೋಶಿಪ್‌ಗೆ ಆಯ್ಕೆಯಾಗಿದ್ದರಿಂದ ಸಂದರ್ಶಕ ಪ್ರಾಧ್ಯಾಪಕ ಹುದ್ದೆಗೆ ದಿನಾಂಕ: 18.01.2018ರಂದು ರಾಜೀನಾಮೆ ನೀಡಿರುವುದರಿಂದ ಡಾ.ಎಂ.ವಿ.ಶ್ರೀನಿವಾಸಗೌಡ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕ್ರಮ ಕೈಗೊಂಡಿರುವುದನ್ನು ಗಮನಿಸಿದ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.21 | ಅಂತರಾಷ್ಟ್ರೀಯ ಸಂಶೋಧನಾ ಸಹಯೋಗದೊಂದಿಗೆ ಯೋಜನೆಯನ್ನು ಕೈಗೊಳ್ಳಲು ಅನುಮತಿ ಕೋರಿರುವ ಬಗೆಗೆ. |
| ತೀರ್ಮಾನ | ಡಾ. ಅಸ್ನಾ ಉರೂಜ್, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಆಹಾರ ಮತ್ತು ಪೌಷ್ಠಿಕತೆ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ಇವರು ಅಂತರಾಷ್ಟ್ರೀಯ ಸಂಶೋಧನಾ ಸಹಯೋಗದ ಪ್ರಸ್ತಾವನೆಗೆ ಮೈಸೂರು ವಿಶ್ವವಿದ್ಯಾನಿಲಯವು Northwestern University, US ಇವರೊಡನೆ "Prevalence of Asthma and Food Allergy Among Children From Selected Rural and Urban Schools of Mysore Region" ಎಂಬ ವಿಷಯದ ಯೋಜನೆಯನ್ನು ಕೈಗೊಳ್ಳಲು ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/8.22 | ಶ್ರೀ.ಎನ್.ರಾಚಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಹಲವಾರು ಪೀಠಗಳು, ಕೇಂದ್ರಗಳಿಗೆ ಸಂದರ್ಶಕ ಪ್ರಾಧ್ಯಾಪಕ/ತಜ್ಞರನ್ನು ನೇಮಿಸುತ್ತಿದ್ದು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಬೋಧನೆ ಮಾಡುವಂತಹ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವಂತೆ ಸಿಂಡಿಕೇಟ್ ಸದಸ್ಯರಾದ ಪ್ರೊ. ಮಹದೇವ ಅವರು ಸಭೆಯಲ್ಲಿ ಒತ್ತಾಯಿಸಿದರು. ಮಾನ್ಯ ಕುಲಪತಿಯವರು ಸಂದರ್ಶಕ ಪ್ರಾಧ್ಯಾಪಕ/ತಜ್ಞರನ್ನು ನೇಮಿಸುವಾಗ ಈ ಅಂಶವನ್ನು ಪರಿಗಣಿಸಲಾಗುವುದು ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಶ್ರೀ.ಎನ್.ರಾಚಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಅಧಿಕಾರವನ್ನು ಸಭೆಯ ಅಧ್ಯಕ್ಷರಾದ ಮಾನ್ಯಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.23 | ಅರ್ಥಶಾಸ್ತ್ರ ಮತ್ತು ಸಹಕಾರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಮತ್ತು ಇತಿಹಾಸ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಪ್ರೊ.ಎಂ.ಇಂದಿರಾ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು |

| | |
|---|---|
| | ದಿನಾಂಕ: 30.09.2019ರಂದು ವಯೋನಿವೃತ್ತಿ ಹೊಂದುತ್ತಿರುವುದರಿಂದ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಎಸ್.ಮಹೇಂದ್ರ ಕುಮಾರ್ ಇವರನ್ನು ವಿಭಾಗದ ಅಧ್ಯಕ್ಷರನ್ನಾಗಿ;<br><br>ಪ್ರೊ. ಖೈಸರ್ ಜಹಾನ್ ಬೇಗಂ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 30.09.2019ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿರುವುದರಿಂದ ಇವರ ನಂತರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಎಂ.ಚಂದ್ರಶೇಖರ್‌ರವರನ್ನು ವಿಭಾಗದ ಅಧ್ಯಕ್ಷರನ್ನಾಗಿ; ಮತ್ತು<br><br>ಪ್ರೊ. ವೈ.ಹೆಚ್.ನಾಯಕವಾಡಿ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಮೈಸೂರು ಇವರ ವಿಭಾಗದ ಅಧ್ಯಕ್ಷ ಹುದ್ದೆಯ ಅವಧಿಯು ದಿನಾಂಕ: 03.09.2019ಕ್ಕೆ ಅಂತ್ಯಗೊಳ್ಳುವುದರಿಂದ ಇವರ ನಂತರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಜಿ.ಟಿ.ಸೋಮಶೇಖರ್‌ರವರು, ನನಗಿಂತ ವಯಸ್ಸಿನಲ್ಲಿ ಹಿರಿಯರಾಗಿರುವ ಪ್ರೊ. ಪುಟ್ಟಯ್ಯನವರು 2022ಕ್ಕೆ ವಯೋ ನಿವೃತ್ತರಾಗುವುದರಿಂದ ಸದರಿಯವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಅವಧಿ ಮುಗಿದ ನಂತರ ನನ್ನನ್ನು ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡುವಂತೆ ಮನವಿ ಪತ್ರ ಸಲ್ಲಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಪ್ರೊ. ಪುಟ್ಟಯ್ಯ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ವಿಭಾಗದ ಅಧ್ಯಕ್ಷರನ್ನಾಗಿ **2 ವರ್ಷಗಳ ಅವಧಿಗೆ ಅಥವಾ ನಿವೃತ್ತಿ ಹೊಂದುವ ದಿನಾಂಕ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಯಾವುದೂ ಮೊದಲು ಘಟಿಸುವುದೊ ಅದುವರೆಗೆ ನೇಮಕಮಾಡಲು** ಸಿಂಡಿಕೇಟ್ ತೀರ್ಮಾನಿಸಿತು. |
| 2019/8.24 | ಮಂಟೆಸ್ವಾಮಿ, ಸಿದ್ದಪ್ಪಾಜಿ ಮತ್ತು ರಾಜಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತು – ಅನುದಾನವನ್ನು ಹಿಂತಿರುಗಿಸುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಂಟೆಸ್ವಾಮಿ, ಸಿದ್ದಪ್ಪಾಜಿ ಮತ್ತು ರಾಜಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಸಲುವಾಗಿ ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆ(ಸಂಸ್ಕೃತಿ ಶಾಖೆ) ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರು ರೂ.1,00,00,000/-ಗಳ ಅನುದಾನವನ್ನು ಮಂಜೂರು ಮಾಡಿ, ಸದರಿ ವಿಷಯವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಿಸಿದ ಹಿನ್ನೆಲೆಯಲ್ಲಿ ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರಿಂದ ಪ್ರಸ್ತಾವನೆಯನ್ನು ಸ್ವೀಕರಿಸಿ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಆದರೆ ಸರ್ಕಾರವು ರೂ.30.00 ಲಕ್ಷಗಳನ್ನು ಮಾತ್ರ ಮಂಜೂರು ಮಾಡಿದ್ದು ಈ ಹಣದಿಂದ ಪೀಠಗಳನ್ನು ಸ್ಥಾಪಿಸಿ ಪರಿಣಾಮಕಾರಿಯಾಗಿ ಕಾರ್ಯಚಟುವಟಿಕೆಗಳನ್ನು ಸಾಧ್ಯವಿಲ್ಲವೆಂದು ಮತ್ತು ಈ ಮಧ್ಯೆ ಕುಲಪತಿಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರು ಸದರಿ ಪೀಠವನ್ನು ಹಂಪಿ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲು ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳಲ್ಲಿ ಮನವಿ ಪತ್ರ ಸಲ್ಲಿಸಿರುತ್ತಾರೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದು ರೂ. 30.00 ಲಕ್ಷಗಳನ್ನು ವರ್ಗಾಯಿಸುವುದರ ಬಗ್ಗೆ ಸಭೆಯು ಸಲಹೆ ನೀಡಬೇಕೆಂದರು.<br><br>ಸುದೀರ್ಘವಾಗಿ ಚರ್ಚಿಸಿದ ಸಭೆಯು ಮಂಟೆಸ್ವಾಮಿ, ಸಿದ್ದಪ್ಪಾಜಿ ಮತ್ತು ರಾಜಪ್ಪಾಜಿ ಇವರುಗಳ ಬಗೆಗಿನ ಅಧ್ಯಯನವು ಮಹತ್ವದ್ದಾಗಿದ್ದು ಮೈಸೂರು ಜಿಲ್ಲೆಯಲ್ಲೇ ಹೆಚ್ಚಿನ ಮಾಹಿತಿಗಳು ದೊರೆಯುವುದರಿಂದ ಸದರಿ ಪೀಠವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲೇ ಉಳಿಸಿಕೊಂಡು ಸದರಿ ಪೀಠಗಳು ಈ ಭಾಗದಲ್ಲೇ ಕಾರ್ಯನಿರ್ವಹಿಸುವುದರ ಮಹತ್ವವನ್ನು ಸರ್ಕಾರಕ್ಕೆ ವಿವರಿಸಿ ಉಳಿಕೆ ಅನುದಾನವನ್ನು ಕೋರಿ ಸರ್ಕಾರಕ್ಕೆ ಪತ್ರ ಬರೆದು ಬಿಡುಗಡೆಯಾದ ನಂತರ ಪೀಠವನ್ನು ಸ್ಥಾಪಿಸಲು ಕ್ರಮಕೈಗೊಳ್ಳಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು. |

| | |
|---|---|
| **ತೀರ್ಮಾನ** | ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದಂತೆ ಮಂಟೆಸ್ವಾಮಿ, ಸಿದ್ದಪ್ಪಾಜಿ ಮತ್ತು ರಾಜಪ್ಪಾಜಿ ಇವರುಗಳ ಬಗೆಗಿನ ಅಧ್ಯಯನವು ಮಹತ್ವದ್ದಾಗಿದ್ದು ಮೈಸೂರು ಜಿಲ್ಲೆಯಲ್ಲೇ ಹೆಚ್ಚಿನ ಮಾಹಿತಿಗಳು ದೊರೆಯುವುದರಿಂದ ಸದರಿ ಪೀಠಗಳು ಈ ಭಾಗದಲ್ಲೇ ಕಾರ್ಯನಿರ್ವಹಿಸುವುದರ ಮಹತ್ವವನ್ನು ಸರ್ಕಾರಕ್ಕೆ ವಿವರಿಸಿ ಉಳಿಕೆ ಅನುದಾನವನ್ನು ಕೋರಿ ಸರ್ಕಾರಕ್ಕೆ ಪತ್ರ ಬರೆದು ಸದರಿ ಪೀಠವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲೇ ಉಳಿಸಿಕೊಂಡು ಉಳಿದ ಅನುದಾನದ ಬಿಡುಗಡೆಗೆ ಕೋರಬೇಕೆಂದು ನಂತರ ಪೀಠವನ್ನು ಸ್ಥಾಪಿಸಲು ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. |
| 2019/8.25 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿರುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿರುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮಕ್ಕೆ ಮತ್ತಷ್ಟು ತಿದ್ದುಪಡಿಗಳಾಗಬೇಕಾದ್ದರಿಂದ ಸದ್ಯ ವಿಷಯವನ್ನು ಮುಂದೂಡಲಾಯಿತು. |
| 2019/8.26 | Promotion of University Research and Scientific Execellence DST-PURSE-PHASE-II |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ Promotion of University Research and Scientific Execellence DST-PURSE-PHASE-IIನ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ವಿ.ರವಿಶಂಕರ್ ರೈ, ಪ್ರಾಧ್ಯಾಪಕರು, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 30.06.2019ರಂದು ವಯೋನಿವೃತ್ತಿ ಹೊಂದಿರುವುದರಿಂದ ಇವರ ಬದಲಿಗೆ ಪ್ರಭಾರ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಸ್.ಚಂದ್ರನಾಯಕ್, ಪ್ರಾಧ್ಯಾಪಕರು ICAR-AICRP ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 22.07.2019ರಂದು ನೇಮಕ ಮಾಡಿರುವುದನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿತು. |
| 2019/8.27 | Department of Disability & Rehabilitation Studies ವಿಭಾಗವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗವು ಅಂಗ ವೈಕಲ್ಯ ಮತ್ತು ಪುನರ್ವಸತಿ ಅಧ್ಯಯನ (Department of Disability & Rehabilitation Studies) ವಿಭಾಗವನ್ನು ಸ್ಥಾಪಿಸಲು ನಿರ್ದೇಶಿಸಿದ್ದು ಅದರಂತೆ ಕ್ರಮಕೈಗೊಳ್ಳುವ ಸಲುವಾಗಿ ವಿಶ್ವವಿದ್ಯಾನಿಲಯದ ಡೀನರ ಸಮಿತಿಯು ಸಭೆ ಸೇರಿ ಚರ್ಚಿಸಿ ನೀಡಿರುವ ಅಭಿಪ್ರಾಯದಂತೆ DOS in Physical Education and Sports Sciencesನಲ್ಲಿ ಸದರಿ ವಿಭಾಗವನ್ನು ಪ್ರಾರಂಭಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.28 | ದಿನಾಂಕ 22-07-2019ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗೆಗೆ. |
| ತೀರ್ಮಾನ | ದಿನಾಂಕ: 22.07.2019ರಂದು 2019-20ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗಳಿಸಲು ನಡೆದ ಸ್ಥಾಯಿ ಸಮಿತಿ ಸಭೆಯ ನಡವಳಿಯನ್ನು ಸಭೆಯಲ್ಲಿ ಅನುಮೋದಿಸಲಾಯಿತು. |
| 2019/8.29 | International Institute for Assisted Reproductive Technology and Research Centre, Gopal Gowda Shanthaveri Memorial Hospital, Nazarbad Mysore, Specialized ಕೇಂದ್ರದ ವಿಳಾಸವನ್ನು #81-82, Vidyaranyapura – Nanjanagud road, near JSS Arts College, |

| | |
|---|---|
| | Mysore – 570 025 ಇಲ್ಲಿಗೆ ಸ್ಥಳ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿ. |
| ತೀರ್ಮಾನ | International Institute for Assisted Reproductive Technology and Research Centre, Gopal Gowda Shanthaveri Memorial Hospital, Nazarbad Mysore, Specialized ಕೇಂದ್ರದ ವಿಳಾಸವನ್ನು #81-82, Vidyaranyapura – Nanjanagud road, near JSS Arts College, Mysore – 570 025 ಇಲ್ಲಿಗೆ, ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ಪೂರೈಸಿರುವುದರಿಂದ, ಸ್ಥಳ ಬದಲಾವಣೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮತಿಸಿತು. |
| 2019/8.30 | ಮೈಸೂರು ವಿಶ್ವವಿದ್ಯಾನಿಲಯ ಮತ್ತು Geological Survey of India Training Institute Hyderabad, ಇವುಗಳ ನಡುವೆ Collaboration for Academic, Research and Training Programme ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯ ಮತ್ತು Geological Survey of India Training Institute Hyderabad, ಇವುಗಳ ನಡುವೆ Collaboration for Academic, Research and Training Programme ವಿಷಯದಲ್ಲಿ Director, Centre for Information Science and Technology(CIST) University of Mysore, M.G.M, Mysuru, ಅವರ MOU ಕರಡು ಪ್ರತಿಯನ್ನು ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಒಡಂಬಡಿಕೆ ಮಾಡಿಕೊಂಡಿರುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/8.31 | ಡಾ. ಕೆ.ನಾರಾಯಣ ಭಟ್ಟ, ಸಹ ಪ್ರಾಧ್ಯಾಪಕರು, ಸಂಸ್ಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಖಾಯಂಪೂರ್ವ ಸೇವಾವಧಿಯನ್ನು ಘೋಷಿಸುವ ಬಗ್ಗೆ. |
| ತೀರ್ಮಾನ | ಘನ ನ್ಯಾಯಾಲಯಗಳು ಮೊಕದ್ದಮೆ ಮತ್ತು ಮೇಲ್ಮನವಿಗಳ ತೀರ್ಪನ್ನು ಆಧರಿಸಿ ವಹಿಸಬಹುದಾದ ಕ್ರಮದ ಬಗ್ಗೆ ವಿಶ್ವವಿದ್ಯಾನಿಲಯದ ವಕೀಲರಿಂದ ಲಿಖಿತ ಅಭಿಪ್ರಾಯ ಪಡೆಯಲಾಗಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಡಾ. ಕೆ.ನಾರಾಯಣ ಭಟ್ಟ, ಸಹ ಪ್ರಾಧ್ಯಾಪಕರು, ಸಂಸ್ಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ 02 ವರ್ಷ ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.32 | ಮೈಸೂರು ವಿಶ್ವವಿದ್ಯಾನಿಲಯದ ಸೇವೆಗೆ ಸೇರುವ ಪೂರ್ವದಲ್ಲಿ ಸಲ್ಲಿಸಿದ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಅರ್ಹತಾ ಸೇವೆಯಾಗಿ ಪರಿಗಣಿಸುವ ಬಗೆಗೆ. |
| ತೀರ್ಮಾನ | ಡಾ. ವಿಜಯ ಶೇಷಾದ್ರಿ, ಆಂಗ್ಲ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರು ಮೈಸೂರು ವಿಶ್ವವಿದ್ಯಾನಿಲಯದ ಸೇವೆಗೆ ಸೇರುವ ಪೂರ್ವದಲ್ಲಿ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ (ಕುವೆಂಪು ವಿಶ್ವವಿದ್ಯಾನಿಲಯ ಘಟಕ ಕಾಲೇಜು) ಸರ್ಕಾರದ ಅನುದಾನದಿಂದ ಮಂಜೂರಾದ ಹುದ್ದೆಯಲ್ಲಿ ಸಲ್ಲಿಸಿರುವ ಸೇವೆಯನ್ನು ಮತ್ತು ಈ ಅವಧಿಗೆ ಪಿಂಚಣಿ ವಂತಿಗೆ ಮತ್ತು ರಜಾವಂತಿಗೆಯನ್ನು ಪಾವತಿಸಿರುವುದನ್ನು ಗಮನಿಸಿದ ಸಿಂಡಿಕೇಟ್ 'ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ ಅಧಿನಿಯಮ 1979' ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ಸರ್ಕಾರಿ ಸಂಸ್ಥೆಗಳಲ್ಲಿ ಸಲ್ಲಿಸಿದ ಅವರ ಹಿಂದಿನ ಸೇವೆಯನ್ನು ಪಿಂಚಣಿಗೆ ಅರ್ಹತಾ ಸೇವೆಯಾಗಿ ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| 2019/8.33 | ವಿಶ್ವವಿದ್ಯಾನಿಲಯದ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳು ಮತ್ತು ತಾತ್ಕಾಲಿಕ ಸ್ವಚ್ಛತಾ ಸಿಬ್ಬಂದಿ ಹಾಗೂ ತಾತ್ಕಾಲಿಕ ಸಫಾಯಿ ಕರ್ಮಚಾರಿ ಉದ್ಯೋಗಿಗಳ ಭವಿಷ್ಯ ನಿಧಿ ವಂತಿಕೆ ಪಾವತಿ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿ ಜೂನ್ 1992 ರಿಂದ ಆಗಸ್ಟ್ 2014ರ ವರೆಗಿನ ಅವಧಿಯಲ್ಲಿ ಕಾರ್ಯನಿರ್ವಹಿಸಿದ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳ ಮತ್ತು 2003ರಿಂದ ಫೆಬ್ರವರಿ 2015ರವರೆಗಿನ ತಾತ್ಕಾಲಿಕ ಸ್ವಚ್ಛತಾ ಸಿಬ್ಬಂದಿ ಹಾಗೂ ತಾತ್ಕಾಲಿಕ ಸಫಾಯಿ ಕರ್ಮಚಾರಿ ಉದ್ಯೋಗಿಗಳ ಪ್ರತಿ ಮಾಹೆಯ ಭವಿಷ್ಯ ನಿಧಿ ವಂತಿಕೆಯ ಒಟ್ಟು ಮೊತ್ತ ರೂ. 3,12,88,102/-ರೂ.ಗಳನ್ನು ಆಯುಕ್ತರು, ಪ್ರಾದೇಶಿಕ ಭವಿಷ್ಯ ನಿಧಿ ಸಂಸ್ಥೆ, ಉಪ ಪ್ರಾದೇಶಿಕ ಕಛೇರಿ, ಮೈಸೂರು ಇವರು ವಿಶ್ವವಿದ್ಯಾನಿಲಯವು ಪಾವತಿಸಿರುವುದಕ್ಕೆ ದಾಖಲೆಗಳೊಂದಿಗೆ ಸಲ್ಲಿಸದ ಕಾರಣ ನಿಯಮಾನುಸಾರ ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆಯಿಂದ ಈಗಾಗಲೇ ತೆಗೆದುಕೊಳ್ಳಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಭವಿಷ್ಯ ನಿಧಿ ವಂತಿಕೆಯು ಪಾವತಿಯಾಗಿರುವುದಕ್ಕೆ ಸೂಕ್ತ ಆಡಳಿತಾತ್ಮಕ ಆದೇಶ ನೀಡಲು ಅನುಮೋದಿಸಿತು. |
| 2019/8.34 | ದಿನಾಂಕ 08-08-2019ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 08-08-2019ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/8.35 | ನಿವೃತ್ತಿ ನಂತರವು ತಮ್ಮ ವಶದಲ್ಲಿರುವ ಕೊಠಡಿಗಳನ್ನು ತೆರವುಗೊಳಿಸದೇ ಇರುವ ಅಧ್ಯಾಪಕರುಗಳ ವಿರುದ್ಧ ಕ್ರಮವಹಿಸುವುದರ ಕುರಿತು ರಚಿಸಲಾಗಿದ್ದ ಸಿಂಡಿಕೇಟ್ ಉಪಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ವಯೋನಿವೃತ್ತಿ ಹೊಂದಿದ ನಂತರವೂ ವಿಭಾಗದಲ್ಲಿನ ಕೊಠಡಿಗಳನ್ನು ತೆರವುಗೊಳಿಸದಿರುವ ಬಗ್ಗೆ ರಚಿಸಲಾಗಿದ್ದ ಸಿಂಡಿಕೇಟ್ ಉಪಸಮಿತಿಯು ಸಲ್ಲಿಸಿರುವ ವರದಿಯನ್ನು ಅಂಗೀಕರಿಸಿದ ಸಿಂಡಿಕೇಟ್ ಅದರಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.36 | ಶ್ರೀಮತಿ ಮೇಘನಾ ನಾಗರಾಜ್, ದ್ವಿತೀಯದರ್ಜೆ ಗುಮಾಸ್ತರು, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ರಾಜೀನಾಮೆಯನ್ನು ಅಂಗೀಕರಿಸುವ ಕುರಿತು. |
| ತೀರ್ಮಾನ | ಶ್ರೀಮತಿ ಮೇಘನಾ ನಾಗರಾಜ್, ದ್ವಿತೀಯ ದರ್ಜೆ ಗುಮಾಸ್ತರು, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 13.03.2019ರಂದು ವೈಯಕ್ತಿಕ ಕಾರಣ ನೀಡಿ ಸಲ್ಲಿಸಿದ್ದ ರಾಜೀನಾಮೆ ಪತ್ರವನ್ನು ದಿನಾಂಕ: 14.03.2019ರಿಂದ ಜಾರಿಗೆ ಬಂದಂತೆ ಅಂಗೀಕರಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 2019/8.37 | ಶ್ರೀಮತಿ ರಾಜಮ್ಮ, ಸೇವಕಿ, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸ್ವಯಂ ನಿವೃತ್ತಿ ಹೊಂದಲು ನೀಡಿರುವ ಆದೇಶವನ್ನು ರದ್ದುಗೊಳಿಸಿ, ಸೇವೆಯಲ್ಲಿ ಮುಂದುವರೆಸಲು ಅವಕಾಶ ನೀಡುವ ಬಗ್ಗೆ. |
| ತೀರ್ಮಾನ | ಶ್ರೀಮತಿ ರಾಜಮ್ಮ, ಸೇವಕಿ, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮನವಿ ಸಲ್ಲಿಸಿದ ಮೇರೆಗೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಿರುವ ಆದೇಶವನ್ನು ಹಿಂಪಡೆಯುವಂತೆ ವೈದ್ಯಕೀಯ ದೃಢೀಕರಣ ಪತ್ರದೊಂದಿಗೆ ಕೋರಿರುವುದನ್ನು ಗಮನಿಸಿದ ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್ ಕೆ.ಸಿ.ಎಸ್.ಆರ್. 285(2) (x)ರ ಪ್ರಕಾರ ಶ್ರೀಮತಿ ರಾಜಮ್ಮ ಇವರು ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಿರುವ ಆದೇಶವನ್ನು ಹಿಂಪಡೆಯಲು ಅನುಮೋದಿಸಿತು. |

| | |
|---|---|
| 2019/8.38 | Visit of Prof.G.Hemantha Kumar, Vice-Chancellor, University of Mysore, Mysuru to attend Indo-French Meeting for Higher Education and Research Institutions at Lyon, France. |
| ತೀರ್ಮಾನ | Prof.G.Hemantha Kumar, Vice-Chancellor, University of Mysore ಇವರು ದಿನಾಂಕ: 15.10.2019ರಿಂದ 20.10.2019ರವರೆಗೆ (ಪ್ರಯಾಣ ದಿನಗಳು ಸೇರಿದಂತೆ) Indo-French Meeting for Higher Education and Research Institutions at Lyon, Franceಗೆ ಹೋಗಿ ಬರಲು ಸಭೆಯು ಅನುಮತಿಸಿ ಹಾಗೂ ಇವರಿಗೆ ನಿಯಮಾನುಸಾರ ತತ್ಸಬಂಧ ವೆಚ್ಚಗಳಾದ ವಿಮಾನಯಾನ ಭತ್ಯೆ, ವಾಸ್ತವ್ಯ ಭತ್ಯೆ ಇತರೆ ಪ್ರಾಸಂಗಿಕ ವೆಚ್ಚಗಳನ್ನು ಸಹ ವಿಶ್ವವಿದ್ಯಾನಿಲಯದಿಂದ ಭರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/8.39 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು – ಅನುಸಮರ್ಥನೆಗಾಗಿ. |
| ತೀರ್ಮಾನ | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಮಂಡಿಸಿರುವ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/8.40 | 2019–20ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಆಧಾರದ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ 100 ಸಂಖ್ಯೆ ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಸ್ತರಣಾ ಸಂಯೋಜನಾ ಆದೇಶ ಹೊರಡಿಸಿರುವುದರ ಕುರಿತು ಅನುಸಮರ್ಥನೆಗಾಗಿ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಾದ (1) ಸೆಂಟ್ ಜೋಸೆಫ್ ಕಾಲೇಜ್ ಆಫ್ ಟೀಚರ್ಸ್ ಎಜುಕೇಷನ್, ಮಂಡ್ಯ (2) ಎಇಟಿ ಕಾಲೇಜ್ ಆಫ್ ಎಜುಕೇಷನ್, ಮಂಡ್ಯ (3) ಮಾಂಡವ್ಯ ಕಾಲೇಜ್ ಆಫ್ ಎಜುಕೇಷನ್, ಮಂಡ್ಯ ಈ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ 50 ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 100 ಸಂಖ್ಯೆಯ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ನೀಡುವಂತೆ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/8.41 | ದಿನಾಂಕ 01–07–2019ರಂದು ಸನ್ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2019–20ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೊದಲನೆ ಸಭೆಯ ನಡವಳಿಯ ಅನುಮೋದನೆಗಾಗಿ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೊದಲನೆ ಸಭೆಯ ನಡವಳಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಲಾಯಿತು. |
| 2019/8.42 | ಪ್ರೊ. ಜಿ. ಸುಬ್ರಮಣ್ಯ, ಪ್ರಾಧ್ಯಾಪಕರು(ನಿವೃತ್ತ), ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು 2019–20 ನೇ ಸಾಲಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಜೆನೆಟಿಕ್ಸ್ ಮತ್ತು ಜೆನೋಮಿಕ್ಸ್ ಅಧ್ಯಯನ ವಿಭಾಗದಲ್ಲಿ ಒಬ್ಬರೇ ಖಾಯಂ ಪ್ರಾಧ್ಯಾಪಕರಿರುವುದರಿಂದ ಪ್ರೊ. ಜಿ. ಸುಬ್ರಮಣ್ಯ, ಪ್ರಾಧ್ಯಾಪಕರು(ನಿವೃತ್ತ), ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು 2019–20ನೇ ಸಾಲಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಬೇಕೆಂದು ವಿಭಾಗದ ಅಧ್ಯಕ್ಷರು ಕೋರಿರುವ ಮನವಿಯನ್ನು ಪರಿಗಣಿಸಿದ ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| 2019/8.43 | Yogic Science (ಸ್ನಾತಕೋತ್ತರ) ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸುವ ಬಗ್ಗೆ. |
| ತೀರ್ಮಾನ | 2019-20ರಿಂದ Yogic Science ಸ್ನಾತಕೋತ್ತರ ಕೋರ್ಸ್‌ನ್ನು ಪ್ರಾರಂಭಿಸಬೇಕಾಗಿರು-ವುದರಿಂದ ಕೋರ್ಸಿನ ಪಠ್ಯಕ್ರಮ ಮತ್ತು ನಿಯಮಾವಳಿಗಳನ್ನು ರಚಿಸಲು ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.44 | ಡಾ.ಹೆಚ್.ನಂಜೇಗೌಡ, ನಿವೃತ್ತ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ನಿವೃತ್ತಿ ವೇತನದ ಬಗೆಗೆ. |
| ತೀರ್ಮಾನ | ಡಾ. ಹೆಚ್.ನಂಜೇಗೌಡ, ನಿವೃತ್ತ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಹೂಡಿದ್ದ ಮೊಕದ್ದಮೆ ಸಂಖ್ಯೆ: 54537/2016, ದಿನಾಂಕ: 12.06.2019ರಲ್ಲಿ ಇತ್ಯರ್ಥವಾಗಿರುವುದರಿಂದ ಘನ ನ್ಯಾಯಾಲಯದ ತೀರ್ಪಿನನುಸಾರ ಪೂರ್ಣ ನಿವೃತ್ತಿ ವೇತನ ಸೌಲಭ್ಯಗಳನ್ನು ಬಿಡುಗಡೆ ಮಾಡುವಂತೆ ಕೋರಿರುವುದರ ಮೇಲೆ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸದರಿಯವರ ಸಹೋದ್ಯೋಗಿಯಾದ ಡಾ. ಚಂದವರ ಆರ್ ವಿದ್ಯಾ, ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಡಾ. ಹೆಚ್.ನಂಜೇಗೌಡ ಅವರ ವಿರುದ್ಧ ನ್ಯಾಯಾಲಯದ ಮೊರೆ ಹೋಗಿರುವುದರಿಂದ ಕೆ.ಸಿ.ಎಸ್.ಆರ್ ನಿಯಮ 214-A(1)ರ ಅನ್ವಯ ಘನ ನ್ಯಾಯಾಲಯದಲ್ಲಿ ಮೊಕದ್ದಮೆ ಬಾಕಿಯಿದ್ದರೆ ಪೂರ್ಣ ನಿವೃತ್ತಿ ವೇತನ ಸೌಲಭ್ಯಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಅದರಂತೆ ಮೊಕದ್ದಮೆಯು ಇತ್ಯರ್ಥವಾಗುವವರೆಗೆ ನಿವೃತ್ತಿ ವೇತನ ಸೌಲಭ್ಯಗಳನ್ನು ವಿಸ್ತರಿಸದಿರಲು ಮತ್ತು ಈ ಅಂಶಗಳನ್ನು ಡಾ. ಹೆಚ್.ನಂಜೇಗೌಡರವರಿಗೆ ಹಿಂಬರಹದ ಮೂಲಕ ತಿಳಿಸಲು ಅಗತ್ಯವಿದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| 2019/8.45 | ಮೈಸೂರು ವಿಶ್ವವಿದ್ಯಾನಿಯದ ಸೇವೆಗೆ ಸೇರುವ ಪೂರ್ವದಲ್ಲಿ ಸಲ್ಲಿಸಿದ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಅರ್ಹತಾ ಸೇವೆಯಾಗಿ ಪರಿಗಣಿಸುವ ಬಗೆಗೆ. |
| ತೀರ್ಮಾನ | ಡಾ. ಎಸ್.ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು, ಸಕ್ಕರೆ ತಂತ್ರಜ್ಞಾನ ವಿಭಾಗ, ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ, ಮಂಡ್ಯ ಇವರು ಭಾರತೀ ಕಾಲೇಜು, ಭಾರತೀನಗರ, ಮದ್ದೂರು ತಾ॥ ಮಂಡ್ಯ ಜಿಲ್ಲೆ ಇಲ್ಲಿ ದಿನಾಂಕ: 01.07.1981 ರಿಂದ 12.10.1999ರವರೆಗೆ ಸಲ್ಲಿಸಿರುವ ಸೇವೆಯನ್ನು ಮತ್ತು ಈ ಅವಧಿಗೆ ಪಿಂಚಣಿ ವಂತಿಗೆ ಮತ್ತು ಅದರ ಮೇಲಿನ ಬಡ್ಡಿ ರೂ.1,84,339/-ಗಳನ್ನು ಪಾವತಿಸಿದಲ್ಲಿ 'ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ ಅಧಿನಿಯಮ 1979' ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ಸರ್ಕಾರಿ ಸಂಸ್ಥೆಗಳಲ್ಲಿ ಸಲ್ಲಿಸಿದ ಅವರ ಹಿಂದಿನ ಸೇವೆಯನ್ನು ಪಿಂಚಣಿಗೆ ಅರ್ಹತಾ ಸೇವೆಯಾಗಿ ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.46 | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ಉದ್ಯೋಗಿಯ ಕುಟುಂಬದ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ದಿವಂಗತ ಮೂರ್ತಿ ಡಿ., ನಿಲಯ ಸಹಾಯಕರು, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-1, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 18.11.2018 ರಂದು ನಿಧನರಾಗಿದ್ದು ಈ ಹಿನ್ನೆಲೆಯಲ್ಲಿ ಇವರ ಮಗಳಾದ ಕು.ಮಾನಸ ಎಂ ರವರು ದ್ವಿತೀಯ ಪಿ.ಯು.ಸಿ ತೇರ್ಗಡೆ ಹೊಂದಿರುವುದರಿಂದ ವಿ.ವಿ.ಅಧಿನಿಯಮದ ಪ್ರಕಾರ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ರಚಿಸಿರುವ ಅಧಿನಿಯಮದ ಪ್ರಕಾರ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕಮಾಡಲು ಸಭೆಯು ಅನುಮೋದಿಸಿತು. |

| | |
|---|---|
| 2019/8.47 | ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣಾ ಕೇಂದ್ರದಲ್ಲಿನ ತಾತ್ಕಾಲಿಕ ನೌಕರರಿಗೆ ವೇತನವನ್ನು ವಿಶ್ವವಿದ್ಯಾನಿಲಯದ ಅನುದಾನದಿಂದ ಭರಿಸುವ ಬಗ್ಗೆ. |
| ತೀರ್ಮಾನ | ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ತಾತ್ಕಾಲಿಕ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳಾದ ಶ್ರೀ ಶ್ರೀನಿವಾಸಮೂರ್ತಿ, ಶ್ರೀ ಮಧುಸೂದನ್ ಮತ್ತು ಶ್ರೀ ರಮೇಶ್ ಅವರುಗಳಿಗೆ ವೇತನವನ್ನು ವಿಶ್ವವಿದ್ಯಾನಿಲಯದ ಅನುದಾನದಿಂದಲೇ ಭರಿಸಲು ಸಭೆಯು ಅನುಮೋದಿಸಿತು. |
| 2019/8.48 | ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ಹೊರಗುತ್ತಿಗೆ ನೀಡಲು ಟೆಂಡರ್ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ಸುಧಾರಣೆ ತರುವ ಹಿನ್ನೆಲೆಯಲ್ಲಿ ಮೆ: ಲರ್ನಿಂಗ್ ಸ್ಪೈರಲ್ ಪ್ರೈವೇಟ್ ಲಿಮಿಟೆಡ್, ಕಲ್ಕತ್ತಾ ಇವರೊಂದಿಗೆ ಸೇವಾ ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಸದರಿ ಸಂಸ್ಥೆಯವರ ಕಾರ್ಯ ನಿರ್ವಹಣೆಯಲ್ಲಿ ಹಲವಾರು ಲೋಪದೋಷಗಳು ಕಂಡುಬಂದ ಹಿನ್ನೆಲೆಯಲ್ಲಿ ಇವರಿಗೆ ನೋಟೀಸ್ ಜಾರಿ ಮಾಡಿ ಹೊಸದಾಗಿ ಇ-ಪೋರ್ಟಲ್ ಮೂಲಕ ಟೆಂಡರ್ ಕರೆಯಲು ತಯಾರಿಸಿರುವ ಟೆಂಡರ್ ಅಧಿಸೂಚನೆಯ ಕರಡನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/8.49 | AL-AMEEN INSTITUTE OF MANGMENT STUDIES, HOSUR ROAD, NEAR LALAAGH MAIN GATE, ಬೆಂಗಳೂರು ಇವರಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ Economics, Commerce ಮತ್ತು English ವಿಷಯಕ್ಕೆ ಸಂಶೋಧನಾ ಮಾನ್ಯತೆ ನೀಡುವ ಬಗ್ಗೆ- ಪರಿವೀಕ್ಷಣಾ ಸಮಿತಿಯವರು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | AL-AMEEN INSTITUTE OF MANGMENT STUDIES, HOSUR ROAD, NEAR LALAAGH MAIN GATE, ಬೆಂಗಳೂರು ಇವರಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ Economics, Commerce ಮತ್ತು English ವಿಷಯಕ್ಕೆ ಸಂಶೋಧನಾ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿಯ ವರದಿಯ ಶಿಫಾರಸ್ಸಿನನ್ವಯ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.50 | Institution of Fellowship and recruitment of project fellows at Vijnan Bhavan |
| ತೀರ್ಮಾನ | Institution of Fellowship and recruitment of project fellows at Vijnan Bhavan ಈ ವಿಷಯವನ್ನು ಸಭೆಯು ಅನುಮೋದಿಸಿತು. |
| 2019/8.51 | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳಲ್ಲಿ Smart Classrooms ಸ್ಥಾಪಿಸುವ ಮತ್ತು Integrated Computer projector with Smart Board(Virtual) ಸಾಧನ ಉಪಕರಣವನ್ನು ಖರೀದಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳಲ್ಲಿ Smart Classrooms ಸ್ಥಾಪಿಸುವ ಮತ್ತು Integrated Computer projector with Smart Board (Virtual) ಸಾಧನ ಉಪಕರಣವನ್ನು ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಖರೀದಿಸಿ ಅಳವಡಿಸಲು ಇದಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾನಿಲಯಕ್ಕೆ MHRD ಬಿಡುಗಡೆಗೊಳಿಸಿರುವ RUSA Career Hub ಅನುದಾನದಿಂದ ಭರಿಸಲು ಸಭೆಯು ಅನುಮೋದಿಸಿತು. |

| | |
|---|---|
| 2019/8.52 | ಡಾ.ಪ್ರೀತಿ ಶ್ರೀಮಂಧರ್ ಕುಮಾರ್, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 31-08-2019ರಂದು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿರುವುದರಿಂದ ಪ್ರಸ್ತುತ ಅವರು ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರ ಹುದ್ದೆಯಿಂದ ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಪ್ರೀತಿ ಶ್ರೀಮಂಧರ್ ಕುಮಾರ್, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 31.08.2019ರಂದು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿರುವುದರಿಂದ ಪ್ರಸ್ತುತ ಅವರು ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರ ಹುದ್ದೆಯಿಂದ ಬಿಡುಗಡೆಗೊಳಿಸಿ ಸದರಿ ಕೇಂದ್ರಕ್ಕೆ ಬೇರೊಬ್ಬ ಪ್ರಾಧ್ಯಾಪಕರನ್ನು ನಿಯೋಜಿಸುವಂತೆ ಕೋರಿರುವುದನ್ನು ಪರಿಗಣಿಸಿದ ಸಿಂಡಿಕೇಟ್ ಇವರ ಬದಲಿಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳನ್ನು ಬಲ್ಲ ಮತ್ತೊಬ್ಬ ಅಧ್ಯಾಪಕರನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/8.53 | ದಿನಾಂಕ 22-08-2019 ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡವಳಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ. |
| ತೀರ್ಮಾನ | ದಿನಾಂಕ 22-08-2019 ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು:**

1. ಮಾನ್ಯ ಕುಲಪತಿಯವರು ಮಾತನಾಡಿ ಮುಂದಿನ ಸಿಂಡಿಕೇಟ್ ಸಭೆಯ ನಡವಳಿಯನ್ನು ಅಕ್ಟೋಬರ್ 2019ರಿಂದ ಗಣಕೀಕರಣಗೊಳಿಸುವುದಾಗಿಯೂ ಮತ್ತು ಎಲ್ಲಾ ಸದಸ್ಯರಿಗೆ ಒಂದೊಂದು ಟ್ಯಾಬ್ ನೀಡುವುದಾಗಿಯೂ ಸಭೆಯ ಗಮನಕ್ಕೆ ತಂದರು.

2. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಸಾಮರ್ಥ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೇವಾ ಕೇಂದ್ರದ (ಸಿ.ಪಿ.ಡಿ.ಪಿ.ಎಸ್) ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಪ್ರೊ. ಆಯಿಷಾ ಎಂ. ಶರೀಫ್‌ರವರು ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ವಿಭಾಗದ ಅಧ್ಯಕ್ಷರಾಗಿ ನೇಮಕಗೊಂಡಿರುವುದರಿಂದ ಸಿ.ಪಿ.ಡಿ.ಪಿ.ಎಸ್ ನಿರ್ದೇಶಕರಾಗಿ ಮುಂದುವರೆಯಲು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿ ಮನವಿ ಪತ್ರ ಸಲ್ಲಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.

   **ಪ್ರಾಧ್ಯಾಪಕರ ಮನವಿಯನ್ನು ಪರಿಗಣಿಸಿದ ಸಿಂಡಿಕೇಟ್ ಅವರ ಬದಲಿಗೆ ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ವಿಭಾಗದಲ್ಲೇ ಪ್ರಾಧ್ಯಾಪಕರಾಗಿರುವ ಪ್ರೊ. ಎಸ್.ಜೆ.ಮಂಜುನಾಥ್‌ರವರನ್ನು ಸಿ.ಪಿ.ಡಿ.ಎಸ್ ಕೇಂದ್ರದ ನಿರ್ದೇಶಕರನ್ನಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಲು ಸಿಂಡಿಕೇಟ್ ನಿರ್ಧರಿಸಿತು.**

3. ಮಾನ್ಯ ಕುಲಪತಿಯವರು ಮಾತನಾಡಿ 2018-19ನೇ ಶೈಕ್ಷಣಿಕ ಸಾಲಿನಲ್ಲಿ ಬಹದ್ದೂರ್ ಇನ್ಸ್‌ಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್‌ನಲ್ಲಿ ಎಂ.ಬಿ.ಎ. ಕೋರ್ಸಿಗೆ Sponsored Seat ಗಳನ್ನು 06 ಸೀಟುಗಳಿಂದ 09 ಸೀಟುಗಳಿಗೆ ಮಂಜೂರು ಮಾಡಿರುವಂತೆಯೇ 2019-20ನೇ ಶೈಕ್ಷಣಿಕ ಸಾಲಿಗೂ Sponsored Seat ಗಳನ್ನು 06 ಸೀಟುಗಳಿಂದ 09 ಸೀಟುಗಳಿಗೆ ಮಂಜೂರು ಮಾಡಬಹುದಾಗಿದೆಯೆಂಬ ಪ್ರಸ್ತಾವನೆಯನ್ನು ಸಿಂಡಿಕೇಟ್ ತೀರ್ಮಾನಿಸಿತು.

4. ಬಹದ್ದೂರ್ ಓಲ್ಡ್ ಸ್ಟೂಡೆಂಟ್ 'ಅಲಮ್ನಿ'ಯಿಂದ ರೂ.75.00 ಲಕ್ಷ ರೂಪಾಯಿಗಳು ವಂತಿಗೆಯ ರೂಪದಲ್ಲಿ ಬಂದಿದ್ದು ಬಹದೂರ್ ಕುಟುಂಬದವರು ರೂ. 15.00 ಲಕ್ಷ ರೂಪಾಯಿಗಳುನ್ನು ಸೇರಿಸಿ ರೂ.1.00 ಕೋಟಿಗಳನ್ನು ಇಟ್ಟಿರುತ್ತಾರೆ. ಈ ಹಣದಿಂದ ಬರುವ ಬಡ್ಡಿಯನ್ನು ಕಲಾ ನಿಕಾಯ, ವಿಜ್ಞಾನ ನಿಕಾಯ ಮತ್ತು ವಾಣಿಜ್ಯ ನಿಕಾಯದ ವಿದ್ಯಾರ್ಥಿಗಳಿಗೆ ಕ್ರಮವಾಗಿ ಒಂದೊಂದು ವರ್ಷ 03 ವಿದ್ಯಾರ್ಥಿಗಳಿಗೆ 03 ವರ್ಷದ ಅವಧಿಗೆ ನೀಡಲು ತಿಳಿಸಿರುತ್ತಾರೆ. ಸದರಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯ ಮುಂದೆ ಕೂಲಂಕಷವಾಗಿ ವಿಷಯವನ್ನು ಮಂಡಿಸಲಾಗುವುದೆಂದು ತಿಳಿಸಿದರು.

5. ವಿಶ್ವವಿದ್ಯಾನಿಲಯವು ತನ್ನ ಆಡಳಿತಕ್ಕೊಳಪಟ್ಟಂತೆ ತಾಂತ್ರಿಕ ಮಹಾವಿದ್ಯಾಲಯವನ್ನು ತೆರೆಯಬೇಕೆಂಬ ಆಶಯವನ್ನು ಹೊಂದಿದ್ದು, ಈ ಉದ್ದೇಶಕ್ಕಾಗಿ ಮಾನಸಗಂಗೋತ್ರಿಯಲ್ಲಿ ಸುಮಾರು 10 ಎಕರೆಗಳಷ್ಟು ಜಾಗವನ್ನು ಈಗಾಗಲೇ ಗುರುತಿಸಲಾಗಿದ್ದು ಮಾನಸಗಂಗೋತ್ರಿಯ ಆವರಣದಲ್ಲಿ 2019–20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು.

6. In the Revised 2017 UGC Pay scale, provision has been made to promote UG teachers from Associate Professor to Professor grade. In this regard Statute has been framed and sent to the Government for obtaining Governor's assent. Awaiting Governor's assent, Applications will be invited from the eligible Associate Professors – ಎಂಬ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು.

7. ನಿವೃತ್ತ ಪ್ರಾಧ್ಯಾಪಕರುಗಳಿಗೆ ರಾಜ್ಯ ಸರ್ಕಾರದ ಸಂಬಳದನ್ವಯ ಪಿಂಚಣಿ ಸೌಲಭ್ಯವನ್ನು ನಿಗದಿಪಡಿಸಿ ಗಳಿಕೆ ರಜೆ ಹಾಗೂ ಇನ್ನಿತರೆ ಭತ್ಯೆಗಳನ್ನು ನೀಡಲು ಹಾಗೂ ಪಿಹೆಚ್.ಡಿ ವಾರ್ಷಿಕ ವೇತನ ಬಡ್ತಿಯನ್ನು ನೀಡುವ ಕುರಿತು ಸರ್ಕಾರದಿಂದ ಆದೇಶ ಬಂದ ನಂತರ ಪರಿಶೀಲಿಸಿ ಕ್ರಮಕೈಗೊಳ್ಳಬಹುದಾಗಿದೆಯೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿನ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು